ಆಮೇಲೆ ನಾನು ಒಂಟಿಯಾಗೇ ಉಳಿದೆ..." ಕಥೆ ಕುತೂಹಲ ಘಟ್ಟದಲ್ಲಿರುವಾಗಲೇ ನಾವು ಕುಳಿತಿದ್ದ ಕಡೆಗೆ ಬಂದ ಕೆಲಸಗಾರನೊಬ್ಬ, "ಸ್ವಾಮಿ ಸಮಯ ಆಯ್ತು. ಪಾರ್ಕಿನ ಬಾಗಿಲು ಹಾಕಬೇಕು" ಎಂದು ಎಚ್ಚರಿಸಿದ. ನನಗೆ ನಿರಾಸೆಯಾದರೂ ಧರಣೇಂದ್ರಯ್ಯನವರನ್ನು ಎಬ್ಬಿಸಿಕೊಂಡು ಬಂದೆ.

ಮನೆ ತಲುಪಿದಾಗ ಸಮಯ ಹತ್ತು ಗಂಟೆ. ಅಮ್ಮ ಹಾಗೂ ಮಕ್ಕಳು ಆಗಲೇ ಮಲಗಿದ್ದರು.

ಊಟ ಮುಗಿಸಿ ಧರಣೇಂದ್ರಯ್ಯ ಮಲಗಿದರು.

ನಾನು ಮಲಗಲು ಬಂದಾಗ, "ರೀ, ಏನಂತೆ ಈ ಮುದುಕನ ಕಥೆ? ನಮ್ಮ ಮನೆಯಲ್ಲಿ ಇನ್ನೆಷ್ಟು ದಿನ ಇರುತ್ತಾರೆ?" ಎಂದು ಅಸಹನೆಯಿಂದ ಜ್ಯೋತಿ ಪ್ರಶ್ನಿಸಿದಳು.

ಧರಣೇಂದ್ರಯ್ಯ ಹೇಳಿದ್ದನ್ನು ಸಂಕ್ಷಿಪ್ತವಾಗಿ ಹೇಳಿದೆ.

ತಕ್ಷಣ ನನಗೆ ನಿದ್ರೆ ಹತ್ತಲಿಲ್ಲ. ತಲೆಯಲ್ಲಿ ಧರಣೇಂದ್ರಯ್ಯನವರು ಬದುಕಿರಬಹುದಾದ ಐಷಾರಾಮಿ ಜೀವನದ ಚಿತ್ರಣ ಕಟ್ಟಿಕೊಳ್ಳುತ್ತಿತ್ತು. ಓಡಾಡಲು ಐಷಾರಾಮಿ ಕಾರು, ವಾಸಕ್ಕೆ ಭವ್ಯ ಬಂಗಲೆ ಇಷ್ಟೆಲ್ಲಾ ಇದ್ದೂ ಈ ವ್ಯಕ್ತಿ ಸಾಮಾನ್ಯ ವರ್ಗದ ನಮ್ಮಂತಹವರ ಮನೆಯಲ್ಲಿ ತಂಗಿರಲು ಕಾರಣವಾದರೂ ಏನಿರಬಹುದು? ನಿಜವಾಗಿಯೂ ಇಷ್ಟೊಂದು ಶ್ರೀಮಂತರಾಗಿದ್ದರೆ, ಸಾಮಾನ್ಯನಂತೆ ನಮ್ಮೊಂದಿಗಿರುವುದರ ಹಿಂದಿನ ಉದ್ದೇಶ ಏನಿರಬಹುದು? ಇಂತಹ ಪ್ರಶ್ನೆಗಳಿಗೆ ನನ್ನದೇ ಊಹೆಯಲ್ಲಿ ಮಿಂದೇಳುತ್ತಿದ್ದೆ. ಯಾವಾಗ ನಿದ್ದೆಗೆ ಶರಣಾದೆನೋ, ಬೆಳಗ್ಗೆ ಎಚ್ಚರವಾಗಿ ಗೋಡೆ ಗಡಿಯಾರದ ಕಡೆ ನೋಡಿದಾಗ ಸಮಯ ಎಂಟು ಗಂಟೆ! ಧಡಕ್ಕನೆ ಎದ್ದೆ. ಒಂಬತ್ತು ಗಂಟೆಗೆ ಕೆಲಸಕ್ಕೆ ಹೋಗಬೇಕು. ಇನ್ನರ್ಧ ಗಂಟೆಯಲ್ಲಿ ಸಿದ್ಧವಾಗಿ ಹೊರಡಬೇಕು.

ಮಕ್ಕಳು ಶಾಲೆಗೆ ಹೊರಡಲು ಸಿದ್ಧರಾಗಿದ್ದರು. ನಾನು ಕಚೇರಿಗೆ ಹೊರಡಲು ಅನುವಾಗುತ್ತಿದ್ದಂತೆ ಪತ್ರಿಕೆ ಓದುತ್ತಿದ್ದ ಧರಣೇಂದ್ರಯ್ಯನವರು ಪತ್ರಿಕೆ ಬದಿಗಿರಿಸಿ ನನ್ನ ಹತ್ತಿರಕ್ಕೆ ಬಂದು, "ಸಂಜೆ ಬೇಗ ಬರಲಿಕ್ಕೆ ಸಾಧ್ಯವೆ? ನಿಮ್ಮೊಂದಿಗೆ ಸ್ವಲ್ಪ ಮಾತನಾಡಬೇಕಿತ್ತು" ಎಂದರು.

"ಆಗಲಿ ಪ್ರಯತ್ನ ಪಡುತ್ತೇನೆ" ಎನ್ನುತ್ತಾ ಊಟದ ಡಬ್ಬಿಯನ್ನು ಬ್ಯಾಗಿನೊಳಗೆ ಸೇರಿಸಿಕೊಂಡು, ಸ್ಕೂಟರ್ ಚಾಲನೆ ಮಾಡಿದೆ.

ಕಚೇರಿಯಲ್ಲಿರುವವರೆಗೂ ತಲೆ ತುಂಬಾ ಧರಣೇಂದ್ರಯ್ಯನವರ ಕಥೆಯೇ ತುಂಬಿಕೊಂಡಿತ್ತು. ಎಂದಿಗಿಂತ ಮುಂಚಿತವಾಗಿಯೇ ಕಚೇರಿಯಿಂದ ಹೊರಟು ಮನೆಗೆ ಬಂದೆ. ಮನೆಯಲ್ಲಾಗಲೇ ಮಕ್ಕಳು ಬಂದು ಕುಳಿತಿದ್ದರು. ಅವರಿಗೆ ಈ ಮುದುಕ ಒಂದು ರೀತಿಯ 'ಸ್ಪೆಸಿಮನ್' ತರಹ ಕಂಡು ಕೀಟಲೆ ಮಾಡಲು, ಗೋಳು ಹೊಯ್ದುಕೊಳ್ಳಲು ಆರಂಭಿಸಿದ್ದರು.

ರಶ್ಮಿ ಎರಡು ಲೋಟಗಳಲ್ಲಿ ಚಹಾ ತಂದಿಟ್ಟು ಹೋದಳು. ಮಕ್ಕಳು ಮೂವರೂ ಬಾಗಿಲ ಬಳಿ ಹೋಗಿ ನಮ್ಮಿಬ್ಬರನ್ನು ಇಣುಕಿ ನೋಡುತ್ತಾ ನಿಂತರು. ಇದೇನಿದು ಹುಡುಗರ ಅಪರೂಪದ ನಡೆವಳಿಕೆ ಎಂದುಕೊಳ್ಳುತ್ತಾ ಚಹಾ ಹೀರಿದೆ. ನನ್ನೊಂದಿಗೆ ಚಹಾ ಹೀರಿ ತಕ್ಷಣವೇ ಮುಖವನ್ನು ಕಿವುಚಿಕೊಂಡರು ಧರಣೇಂದ್ರಯ್ಯ.

"ಏಕೆ!... ಏನಾಯ್ತು?" ಎಂದೆ.

"ಏನಿಲ್ಲ ಬಿಡಿ..." ಎನ್ನುತ್ತಾ ಮತ್ತೆ ಚಹಾ ಹೀರುವುದನ್ನು ಮುಂದುವರೆಸಿದರು.

ನಾನು ಎದ್ದು ಅಡುಗೆ ಮನೆಗೆ ಬಂದು, ಮುಸಿ ಮುಸಿ ನಗುತ್ತಿದ್ದ ಮಕ್ಕಳಿಗೆ. "ಏನಾಯ್ತು?" ಎಂದು ಕೇಳಿದೆ.